## ಫೋನ್ ಉತ್ತರವೂ ಇರಲಿ

‘ಕಲರ್ಸ್ ಕನ್ನಡ’ದ ‘ಕನ್ನಡದ ಕೋಟ್ಯಧಿಪತಿ–4’ ಪ್ರಸಾರವಾಗುತ್ತಿರುವುದು ಸರಿಯಷ್ಟೆ. ಆದರೆ ಮನೆಯಲ್ಲೇ ಕುಳಿತು ನೋಡುತ್ತಿರುವವರಿಗೆ ಸ್ಪರ್ಧೆಯಲ್ಲಿ ಭಾಗವಹಿಸುವ ಪ್ರಕ್ರಿಯೆ ತುಂಬಾ ಕ್ಲಿಷ್ಟಕರವಾಗಿದ್ದು, ಕಾರ್ಯಕ್ರಮದ ಮೈನಸ್ ಪಾಯಿಂಟ್ ಅಂದರೆ ತಪ್ಪಾಗಲಾರದು. ಪುನೀತ್ ರಾಜ್‌ಕುಮಾರ್ ಹೇಳುವಂತೆ ‘ಮೈ ಜಿಯೋ’ ಆಪ್ ಡೌನ್‌ಲೌಡ್ ಮಾಡಿಕೊಳ್ಳುವಂತೆ ಹಾಗೂ ‘ವೂಟ್’ (Voot) ಆ್ಯಪ್‌ನಲ್ಲಿ ಬರುವ ಪ್ರಶ್ನೆಗಳಿಗೆ ಉತ್ತರ ಕೊಡಬಹುದಂತೆ. ಈ ಪ್ರಕ್ರಿಯೆ ಸಾಧ್ಯವಾಗುವುದಾದರೆ 4ಜಿ ಸ್ಮಾರ್ಟ್ ಫೋನ್ ಬೇಕೇ ಬೇಕು. ಆದರೆ, 2ಜಿ ಅಥವಾ ಕೀ ಪ್ಯಾಡ್ ಫೋನ್‌ಗಳನ್ನು ಹೊಂದಿದವರು ಪ್ರಶ್ನೆಗಳಿಗೆ ಉತ್ತರಿಸಲು ಹೇಗೆ ಸಾಧ್ಯ?



ಈ ಹಿಂದಿನ 3 ಆವೃತ್ತಿಗಳಲ್ಲಿರುವಂತೆ ಸಂದೇಶ (massage)ದಲ್ಲಿ ಉತ್ತರಿಸುವ ವ್ಯವಸ್ಥೆ ಮಾಡಲಿ. ಹಾಗಾದರೆ ಮಾತ್ರ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬಹುದು. ಈ ಹಿಂದೆ ಉತ್ಸಾಹದಿಂದ ಉತ್ತರದ ಸಂದೇಶ ಕಳಿಸುತ್ತಿದ್ದ ನಾನು ಈಗ ಕಾರ್ಯಕ್ರಮವನ್ನು ಆಸಕ್ತಿಯಿಂದ ನೋಡುತ್ತಿಲ್ಲ.

–ಜಿ. ರಾಮಣ್ಣ, ದಾವಣಗೆರೆ

ವಾರದ ಪತ್ರ

## ಮನೋ ಮಾಲಿನ್ಯ

ಚಂದ್ರಯಾನ–2 ಯೋಜನೆಯ ಇಬ್ಬರು ನಿರ್ದೇಶಕಿಯರು ಮತ್ತು ಈ ಯೋಜನೆಯ ತಂಡದಲ್ಲಿ ಶೇಕಡ 30 ಮಹಿಳೆಯರು ಕೆಲಸ ಮಾಡಿರುವುದು, ಮಹಿಳೆಯರಿಗೆ ಸ್ಫೂರ್ತಿಯಾಗಲಿ. ಕನ್ನಡದ ಕಿರುತೆರೆಯ ಕೆಲವು ಚಾನಲ್‌ಗಳು ಚಂದ್ರಯಾನ–2 ಸಂಭ್ರಮದ ನಡುವೆಯೂ ಚಂದ್ರಗ್ರಹಣದಿಂದ ಅಪಾಯ, ಅನಾಹುತ, ಅನಿಷ್ಟ, ಗಂಡಾಂತರ ಎಂಬ ಸುಳ್ಳಿನ ಅಂತೆ ಕಂತೆಗಳ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿರುವುದು ಅಸಹ್ಯ. ಮೌಢ್ಯವನ್ನು ಬಿತ್ತಲು ಒಬ್ಬ ಜ್ಯೋತಿಷಿಯನ್ನು ಕರೆಸಿ ಚಂದ್ರ ರಾಗ ಹಾಡಿ! ವೀಕ್ಷಕರನ್ನು ಹೆದರಿಸುವುದು ಎಂತಹ ವಿಪರ್ಯಾಸ. ಕೆಲವು ರಾಜಕಾರಣಿಗಳ ಚಂದ್ರ ಗ್ರಹಣ ಪೂಜೆ ಪ್ರಸಾರ ಮಾಡುವುದೇ ಸುದ್ದಿಯಾಗುತ್ತದೆ. ವೈಜ್ಞಾನಿಕ ಆವಿಷ್ಕಾರದಿಂದ ಟೀವಿ ನಡೆಯುತ್ತಿದೆ ಎನ್ನುವ ಸಾಮಾನ್ಯ ಜ್ಞಾನವೂ ಇಲ್ಲದೆ ಹೋದರೆ ಹೇಗೆ?

ವಿಸ್ಮಯದ ಖಗೋಳ ವೈಚಿತ್ರ ಆತಂಕ ಮೂಡಿಸಿತು. ಮಹಿಳೆಯರ ಮೇಲೆ ಪುರುಷರ ದಾಳಿಯ ಹಸಿಬಿಸಿ ದೃಶ್ಯಗಳ ಪ್ರಸಾರ ಮತ್ತು ರಾಜಕಾರಣಿಗಳ ಕುರ್ಚಿ ಕದನದ ದೃಶ್ಯಗಳ ನೇರಪ್ರಸಾರ ವೀಕ್ಷಕರ ಮನಸ್ಸಿನ ಮಾಲಿನ್ಯ ಹೆಚ್ಚಿಸುತ್ತದೆ!

–ಕಾಡನೂರು ರಾಮಶೇಷ, ಹುಲಿಮಂಗಲ

## ಕುತೂಹಲ ಮೂಡಿಸುತ್ತಿರುವ ಆತ್ಮಬಂಧನ

ಝೀ ಕನ್ನಡದಲ್ಲಿ ‘ಆತ್ಮಬಂಧನ’ ಪ್ರಮುಖವಾಗಿ ಆತ್ಮದ ಕತೆಯಾಗಿದೆ. ಆತ್ಮಬಂಧನ ಭವಾನಿಯ ವಿಚಿತ್ರ ನಡವಳಿಕೆಯಿಂದಾಗಿ ಇತ್ತೀಚಿನ ಕಂತುಗಳಲ್ಲಿ ಕುತೂಹಲ ಮೂಡಿಸುತ್ತಿದೆ. ಭವಾನಿಗೆ ತನ್ನ ಸ್ವಂತ ಅಣ್ಣನಾದ ಅಶೋಕನ ಮೇಲೆ ಮತ್ತು ಅವನ ಮಗಳಾದ ಚೈತ್ರಾಳ ಮೇಲೆ ಅದೇನು ದ್ವೇಷವೋ ತಿಳಿಯದು. ತನ್ನ ಸ್ವಂತ ಅಣ್ಣನ ಮೇಲೆ ಹಲ್ಲೆ ಮಾಡುವುದು, ಅವನ ಮಗಳನ್ನು ಹೆದರಿಸುವುದು, ಅದರ ಹಿಂದೆ ಅವಳ ಉದ್ದೇಶವೇನಿದೆ ಎಂದು ತಿಳಿಯದು. ಅವಳಿಗೂ ಅಶೋಕನ ಆಸ್ತಿಯ ಮೇಲೆ ಕಣ್ಣಿದೆಯೇ? ಕೇವಲ ಆಸ್ತಿಯ ಆಸೆಯಿಂದಾಗಿ ರಾಣಿ ತನ್ನ ಕುಟುಂಬದ ನಾಶದ ಬಗ್ಗೆ ಷಡ್ಯಂತ್ರ ರೂಪಿಸುತ್ತಿದ್ದಾಳೆ ಎಂದು ಇಲ್ಲಿಯವರೆಗೂ ಭಾವಿಸಿದ್ದೆವು. ಆದರೆ ಆ ಕುಟುಂಬದ ಬಗ್ಗೆ ಅವಳಿಗೇಕೆ ದ್ವೇಷ ಎಂಬುದನ್ನು ನಿರ್ದೇಶಕರು ಇತ್ತೀಚೆಗೆ ಬಯಲು ಮಾಡಿದ್ದಾರೆ.

ಚಿರುನ ಆತ್ಮ ಮಾಡುವ ಅವಘಡಗಳನ್ನು ಕಂಡಾಗ ಜೀವಂತ ಮಗುವಿಗೆ ಇಲ್ಲದ ಶಕ್ತಿ ಅದರ ಆತ್ಮಕ್ಕೆ ಇರುತ್ತದೆಯೇ ಎಂಬ ಪ್ರಶ್ನೆ ಮೂಡುತ್ತದೆ. ಒಟ್ಟಿನಲ್ಲಿ ಆತ್ಮದಿಂದ ಆರಂಭಗೊಂಡ ಕತೆ ವಿಜ್ಞಾನದತ್ತ ಹೊರಳುತ್ತಿರುವುದು ಸ್ವಾಗತಾರ್ಹ ಅಂಶ.

–ಮುರಲೀಧರ ಕುಲಕರ್ಣಿ, ಬೀದರ್

## ಝೀ ವಾಹಿನಿಗೊಂದು ಸಲಾಮ್

ಪ್ರೀತಿಯಿಂದ, ಖುಷಿಯಿಂದ ಮತ್ತು ಸ್ಫೂರ್ತಿಯಿಂದ ನಡೆಸಿದ 84 ಸಾಧಕರ 110 ಸಂಚಿಕೆಯ ‘ವೀಕೆಂಡ್ ವಿತ್ ರಮೇಶ್’ ಕಾರ್ಯಕ್ರಮದ ರೂವಾರಿ ರಮೇಶ್ ಅರವಿಂದ್‌ರವರ ಆದರ್ಶ ಮತ್ತು ಸಕಾರಾತ್ಮಕ ಚಿಂತನೆ ಯುವ ಪೀಳಿಗೆಗೊಂದು ಮಾದರಿ.

ಗ್ರ್ಯಾಂಡ್ ಫಿನಾಲೆ ಕಾರ್ಯಕ್ರಮದಲ್ಲಿ 84 ಸಾಧಕರ ನೋವು ನಲಿವಿನ ಜೊತೆಗೆ ಒಬ್ಬೊಬ್ಬರು ಒಂದು ಕತೆ, ಆದರೆ ಕೊನೆಗೆ ಸಂತೋಷದ ಯಶಸ್ಸಿನ ಗರಿ ಮೂಡಿ ಬಂತು. ಇಂತಹ ಸಾಧಕರನ್ನು ನೋಡಿ ಸ್ಫೂರ್ತಿ ಪಡೆದ ಗಿರೀಶಗೌಡ, ಅಣ್ಣಾಮಲೈ, ವಿಲಾಸ್ ನಾಯಕ ಮುಂತಾದ ಯುವಜನತೆ ಮಾಡುತ್ತಿರುವ ಉತ್ತಮ ಕಾರ್ಯಕ್ರಮದ ಪರಿಚಯವನ್ನು ಸಂವಾದದ ರೀತಿ ನಡೆಸಿದ್ದು ಉತ್ತಮವಾಗಿ ಮೂಡಿ ಬಂತು.

–ವೀಣಾ ಶಂಕರ್, ಬೆಂಗಳೂರು

## ಇಷ್ಟದ ಜಾನಕಿ

‘ಕಲರ್ಸ್ ಸೂಪರ್’ನ ‘ಮಗಳು ಜಾನಕಿ’ ವೀಕ್ಷಕರ ಮನಮುಟ್ಟಿದ ಧಾರಾವಾಹಿ. ಜಾನಕಿಯ ಗಂಡನ ಮನೆಯವರಿಗೆ ಅವಳು ನಿರಂಜನನ ಹೆಂಡತಿ ಎಂಬುದರ ಬಗೆಗೆ ಅರಿವಿಲ್ಲದೆ ಇದ್ದರೂ ಅವರ ಕಷ್ಟಸುಖದಲ್ಲಿ ಭಾಗಿಯಾಗುವುದರ ಮೂಲಕ ಉತ್ತಮ ಸೊಸೆಯಾಗಿ ಎಲ್ಲರ ಮೆಚ್ಚುಗೆ ಗಳಿಸಿದ್ದಾಳೆ.

–ಎಸ್. ವಿಜಯಕುಮಾರಿ, ಬೆಂಗಳೂರು

## ಫಲಿಸದ ಉಪಾಯ

‘ಕಮಲಿ’ ಧಾರಾವಾಹಿ ಪ್ರಾರಂಭದಿಂದ ಇವತ್ತಿನವರೆಗೂ ಕಾಮಿನಿ ಅಮ್ಮಮ್ಮನ ಪ್ಲಾನ್‌ಗಳು ಪ್ಲಾಪ್ ಆಗುತ್ತ ಬಂದಿದೆ. ನಟನೆ ಕೃತಕತೆಯಿಂದ ಕೂಡಿದೆ. ಪಕಪಕ ನಗು ಪಿಶಾಚಿ ನಕ್ಕಂತೆ ಬಾಸವಾಗುತ್ತೆ. ಇನ್ನು ಇವಳ ಮಗಳು ಊರ್ಮಿ ಉಪಾಯವೂ ಫಲಿಸಲಿಲ್ಲ. ಮೊಮ್ಮಗಳು ಅನಿತಾ ಮಹಾಜನ್ ಆಸೆಯೂ ಈಡೇರದೆ ಮೂಗು ತೂರಿಸುವುದಾಗಿದೆ. ಬೆಸ್ಟ್ ವಿಲನ್ ಪ್ರಶಸ್ತಿ ಇದ್ದಂತೆ ಪ್ಲಾಪ್ ವಿಲನ್ ಪ್ರಶಸ್ತಿ ಇದ್ದರೆ ಚೆನ್ನ. ರಿಷಿ ಅಣ್ಣನ ನಟನೆ, ಮಾತು ಎಡಕಲ್ಲು ಚಂದ್ರಶೇಖರ್ ನೆನಪಾಗುತ್ತಾರೆ.

–ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಮರೆಯಾದ ‘ಮಧುರ ಗಾನ’

ಸಾರ್ಥವಳ್ಳಿಯವರ ನಿರೂಪಣಾ ಕಥನದಿಂದ ಆರಂಭವಾಗಿ ಹಳೆಯ ಚಿತ್ರಗೀತೆಗಳ ಹಿನ್ನೆಲೆಯಲ್ಲಿ ಸುಮಾರು 9 ವರ್ಷಗಳಿಂದ ದೂರದರ್ಶನ ಚಂದನದಲ್ಲಿ ಪ್ರಸಾರವಾಗುತ್ತಿದ್ದ ‘ಮಧುರ ಮಧುರವೀ ಮಂಜುಳ ಗಾನ’ ಕಾರ್ಯಕ್ರಮ ನಿಂತಿರುವುದು ಬೇಸರವೆನಿಸಿದೆ. ನಾವು ಕೇಳದೆ ಇದ್ದ ಹಲವಾರು ಹಳೆಯ ಕನ್ನಡ ಚಿತ್ರಗೀತೆಗಳನ್ನು ಕೇಳಿಸುವುದರೊಂದಿಗೆ ಅದರ ಹಿನ್ನೆಲೆ, ಸಾಹಿತ್ಯವನ್ನೂ ನವಿರಾಗಿ ಸಾರ್ಥವಳ್ಳಿಯವರು ಕಾವ್ಯಮಯವಾಗಿ ನಿರೂಪಿಸುತ್ತಿದ್ದರು. ಕಾರ್ಯಕ್ರಮ ನಿಂತಿರುವುದು ಅತ್ಯಂತ ಬೇಸರ. ದಯಮಾಡಿ ಮುಂದುವರಿಸಲು ಕೋರಿಕೆ.

– ಎಸ್. ರಾಜಶೇಖರ್, ಬೆಂಗಳೂರು